ದಿನಾಂಕ:**11.11.2024** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀ ಎಂ ಎಸ್ ಎಲ್ ವಕೀಲರಿಂದ:-

ಕೃಷ್ಣನಾಯ್ಕ ರವರ ಮರಣ ಪ್ರಮಾಣಪತ್ರವನ್ನು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ. ರಾಮನಾಯ್ಕ, ಲೋಕನಾಯ್ಕ, ಶ್ಯಾಮನಾಯ್ಕ, ನೀಲಾಬಾಯಿ, ಹೇಮಂತ್ ನಾಯ್ಕ, ಪುಟ್ಟಾನಾಯ್ಕ - ಇವರುಗಳು ನನ್ನ ಸಹೋದರ - ಸಹೋರಿಯರು. ನಾವು ಸಹೋದರರುಗಳು ಎಲ್ಲಾ ಸೇರಿ Crl. Misc.64/2019 ರಂತೆ ಇದೇ ನ್ಯಾಯಾಲಯದಲ್ಲಿ ಕೃಷ್ಣ ನಾಯ್ಕ ರವರ ಮರಣ ಪ್ರಮಾಣ ಪತ್ರ ಪಡೆಯಲು ಮರಣ ದಿನಾಂಕವನ್ನು ನಮೂದು ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ದಿನಾಂಕ 10.06.2000 ರಂದು ಕೃಷ್ಣ ನಾಯ್ಕ ರವರು ಮೃತಪಟ್ಟಿರುತ್ತಾರೆ ಎಂದು ಮಾಹಿತಿ ನೀಡಿ ದಾಖಲೆ ನೀಡಿ ಮರಣ ಪ್ರಮಾಣ ಪತ್ರವನ್ನು ಪಡೆದಿರುತ್ತೇವೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ರಾಮನಾಯ್ಕ ರವರು ನ್ಯಾಯಾಲಯಕ್ಕೆ ಬಂದು ಪ್ರಾಸಾ1 ಎಂದು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿ. ಕೃಷ್ಣನಾಯ್ಕ ರವರು 1999 ರ ಜನವರಿಯಿಂದ ಟಿ.ಬಿ.ಖಾಯಿಲೆಯಿಂದ ನರಳುತ್ತಿದ್ದರು ಮತ್ತು ಅವರು ಬಾಣಾವರ ಮತ್ತು ಅರಸೀಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಆದರೂ ಸಹ ಖಾಯಿಲೆ ವಾಸಿಯಾಗಿರುವುದಿಲ್ಲ ಎಂದರೆ ಸರಿ. ನಂತರ ಕೃಷ್ಣನಾಯ್ಕ ರವರು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಕೃಷ್ಣ ನಾಯ್ಕ ರವರು ಚಿಕಿತ್ಸೆ ಫಲಿಸದೆ ದಿ:25.03.1999 ರಂದು ಮರಣಹೊಂದಿರುತ್ತಾರೆ ಎಂದರೆ ಸರಿಯಲ್ಲ, ಅವರು ನಮ್ಮ ಊರಿನಲ್ಲಿ ಮೃತಪಟ್ಟಿರುತ್ತಾರೆ.

ಕೃಷ್ಣನಾಯ್ಕ ರವರು ನನ್ನ ಸೋದರ ಮಾವ ಎಂದು ತೋರಿಸಲು ಯಾವ ದಾಖಲೆ ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿಯು ದಾಖಲೆ ಇದೆ ಅದು ನಮ್ಮ ಮನೆಯಲ್ಲಿ ಇದೆ. ಅದು ಏನು ದಾಖಲೆ ಎಂದರೆ ಸಾಕ್ಷಿಯು ನಾವು ಕೃಷ್ಣ ನಾಯ್ಕ ರವರಿಂದ ಜಮೀನನ್ನು ಮಾಡಿಸಿಕೊಂಡಿರುವ ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ಖಾತೆ ಮಾಡಿಕೊಡಲು ಕೊಪ್ಪಲು ಗ್ರಾಮದ ತಮ್ಮಯ್ಯಪ್ಪ ರವರು ಅರ್ಜಿ ನೀಡಿರುತ್ತಾರೆ. ತಮ್ಮಯ್ಯಪ್ಪ ರವರು ನಮ್ಮ ಹೆಸರಿಗೆ ಖಾತೆಯಾಗಬೇಕು ಎಂದು ಹೇಳಿ ಅರ್ಜಿ ಬರೆದು ನೀಡಿರುತ್ತಾರೆ. ಕೃಷ್ಣನಾಯ್ಕ ರವರು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ದಿಃ25.03.1999 ರಂದು ಮೃತಪಟ್ಟಿದ್ದರು ಸಹ ನಾವು 2000 ನೇ ಇಸವಿಯಲ್ಲಿ ಅಂದರೆ ದಿಃ10.06.2000 ರಲ್ಲಿ ನಮ್ಮ ಊರಿನಲ್ಲಿಯೇ ಮೃತಪಟ್ಟಿರುತ್ತಾರೆ ಎಂದು ಸುಳ್ಳು ಮಾಹಿತಿ ನೀಡಿ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯದಿಂದ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಖಾತೆ ಮಾಡಿಸಲು ನನಗೆ ಸುಮಾರು 2 ಲಕ್ಷ ಹಣ ಖರ್ಚಾಗಿರುತ್ತದೆ. ಸದರಿ 2 ಲಕ್ಷ ಹಣವನ್ನು ಯಾರು ಯಾರಿಗೆ ನೀಡಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ. ಕೃಷ್ಣನಾಯ್ಕ ರವರು ಯಾವುದೇ ಮರಣಶಾಶನವನ್ನು ನಮ್ಮ ಹೆಸರಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಕಂದಾಯ ಇಲಾಖೆಯವರು ಷರಿಕ್ಕಾಗಿ ರೂ.2 ಲಕ್ಷ ಹಣವನ್ನು ನಾನು ಖರ್ಚು ಮಾಡಿ ಮೋಸದಿಂದ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಕೃಷ್ಣನಾಯ್ಕ ರವರು ದಾವಾ ಸ್ವತ್ತನ್ನು 1 ನೇ ಪ್ರತಿವಾದಿಯ ತಂದೆ ಪಕೀರಪ್ಪ ಮತ್ತು 2 ನೇ ಪ್ರತಿವಾದಿಯಾದ ಮಲ್ಲೇಶಪ್ಪ ರವರಿಗೆ ದಿಃ10.05.1996 ರಂದು ತಲಾ 2 ½ ಎಕರೆಯಂತೆ ಒಪ್ಪಂದ ಕರಾರು ಪತ್ರ ಮಾಡಿಕೊಟ್ಟು ಆದೇ ದಿನ ಸ್ವಾಧೀನವನ್ನು ಸಹ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕೃಷ್ಣನಾಯ್ಕ ರವರು ಮಾಡಿಕೊಟ್ಟ ಸದರಿ ಒಪ್ಪಂದ ಕರಾರು ಪತ್ರದಂತೆ ಶುದ್ಧ ಕ್ರಯ ಪತ್ರ ಮಾಡಿಕೊಡಿ ಎಂದು 1 ನೇ ಪ್ರತಿವಾದಿಯ ತಂದೆ ಮತ್ತು 2 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಅಸಲು ದಾವೆ ಸಂ.141/1997 ಹಾಗೂ 143/1997 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಎರಡೂ ದಾವೆಗಳು ಡಿಕ್ರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಅದು ಎಲ್ಲಾ ಸುಳ್ಳು.

ಕೃಷ್ಣನಾಯ್ಕ ರವರು ಮಾಡಿಕೊಟ್ಟ ಸದರಿ ಒಪ್ಪಂದ ಕರಾರು ಪತ್ರದಂತೆ ದಿಃ10.05.1996 ರಿಂದಲೂ ಸಹಃ ಪ್ರತಿವಾದಿಗಳೆ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಕೃಷ್ಣನಾಯ್ಕ ರವರು ದಾವಾ ಸ್ವತ್ತನ್ನು ಮಾರಾಟ ಮಾಡಿರುವುದಿಲ್ಲ, ಪ್ರತಿವಾದಿಗಳಿಗೆ ಭೋಗ್ಯ ಮಾಡಿಕೊಟ್ಟಿರುತ್ತಾರೆ.

ಕೃಷ್ಣನಾಯ್ಕ ರವರು ನನಗೆ ಸಂಬಂಧಿಕರಲ್ಲದಿದ್ದರು ಸಹ ನಾನು ಅವರ ಆಸ್ತಿ ಲಪಟಾಯಿಸುವ ಉದ್ದೇಶದಿಂದ ಸುಳ್ಳು ಮಾಹಿತಿ ನೀಡಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇರುವುದರಿಂದ ನನಗೆ ತಂಟೆ ತಕರಾರು ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಸಿಂಗಟಗೆರೆ ಪೊಲೀಸ್ ಠಾಣೆಗೆ ನಾವು ಕೃಷ್ಣನಾಯ್ಕರವರ ವಾರಸುದಾರರಾಗಿಲ್ಲದಿದ್ದರು ಸಹ ಅವರಿಗೆ ತೊಂದರೆ ನೀಡುತ್ತಿದ್ದೇವೆ ಎಂದು ದೂರು ನೀಡಿದ್ದರು ಎಂದರೆ ಸರಿಯಲ್ಲ. ನಾವು ವಾರಸುದಾರರಾಗಿಲ್ಲದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರರು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಮತ್ತು ಸುಳ್ಳು ಮಾಹಿತಿ ನೀಡಿ ಸುಳ್ಳು ಮರಣ ಪ್ರಮಾಣ ಪತ್ರ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.